## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ287/2025

**ಸಾಕ್ಷಿಯನ್ನು ದಿಃ 20.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ರಂಜಿತ್ | ಸಿಡಬ್ಲ್ಯೂಃ4 | ಪಿಡಬ್ಲ್ಯೂಃ3 |
| ತಂದೆಯ ಹೆಸರು | ಶಿವೇಗೌಡ | | |
| ವಯಸ್ಸು | 36 ವರ್ಷ | | |
| ಉದ್ಯೋಗ | ಪೆಂಟರ್ | | |
| ವಾಸಸ್ಥಳ | ವಡ್ಡರಹಳ್ಳಿ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಿಪಿ. 2 ರ ಸ್ಥಳ ಮಹಜರ್ ನಲ್ಲಿ ಸಾಕ್ಷಿ ತನ್ನ ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಪಿ. 2(ಬಿ) ಎಂದು ಗುರುತಿಸಲಾಯಿತು. ದಿಃ 03.01.2025 ಮರಳಯ್ಯನಕೊಪ್ಪಲು ಹತ್ತಿರ ಅಪಘಾತದ ಸ್ಥಳದಲ್ಲಿ ಮಹಜರ್ ಮಾಡುತ್ತಿದ್ದು ಆ ಸಮಯದಲ್ಲಿ ನಾನು ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ 2, 3 ಮತ್ತು ಪೊಲೀಸರು ಇದ್ದರು. ಮಹಜರ್ ಅನ್ನು 3.00 ಗಂಟೆ ಯಿಂದ 3.30-4.00 ಗಂಟೆ ವರೆಗೆ ಮಾಡಿರುತ್ತಾರೆ. ಸ್ಥಳದಲ್ಲಿ ಪೋಟೊ ತೆಗೆದಿದ್ದರು. ಸದರಿ ಪೋಟೊಗಳನ್ನು ಈಗಾಗಲೆ ನಿಪಿ. 4 ಎಂದು ಗುರುತಿಸಲಾಗಿದೆ.

ಆದಾದನಂತರ ಬಿಳಿಕೆರೆ ಪೊಲೀಸ್ ಠಾಣೆಗೆ ಹೋಗಿದ್ದು, ಅಪಘಾತದ ಬೈಕ್ ಅನ್ನು ಅಮಾನತ್ತು ಪಡಿಸಿಕೊಂಡರು. ಅಲ್ಲಿ ಒಂದು ಪೋಟೊವನ್ನು ಸಹ ತೆಗೆದಿದ್ದರು.ನಿಪಿ. 3 ರ ಅಮಾನತ್ತು ಮಹಜರ್ ನಲ್ಲಿ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ. 3(ಬಿ) ಎಂದು ಗುರುತಿಸಲಾಯಿತು. ಬೈಕ್ ಅನ್ನು

ಅಮಾನತ್ತು ಪಡಿಸಿಕೊಳ್ಳುವ ಕಾಲಕ್ಕೆ ಫೋಟೊ ತೆಗೆದಿದ್ದು, ಅದನ್ನು ಈಗಾಗಲೆ ನಿಪಿ. 5 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಸಿ.ಬಿ.ಎಸ್ ವಕೀಲರಿಂದ:**

ನಾನು ವಡ್ಡರಹಳ್ಳಿ ಗ್ರಾಮದವನು. ಚಾಸಾ 1 ಮತ್ತು 2 ರವರು ನನಗೆ ಸಂಬಂಧಿಕರಲ್ಲ. ನಾವು ಒಂದೇ ಜನಾಂಗದವರು. ಮಹಜರ್ ಗೆ ಬರಬೇಕೆಂದು ಪೊಲೀಸರು ನೋಟೀಸು ಕೊಟ್ಟಿರಲಿಲ್ಲ, ನಾನು ಮತ್ತು ಚಾಸಾ 3 ರವರು ಖುದ್ದಾಗಿ ಹೋಗಿದ್ದೆ. ಚಾಸಾ 3 ನನ್ನ ಸ್ನೇಹಿತ. ನಾನು ಸ್ಥಳಕ್ಕೆ ಹೋಗಿಲ್ಲ, ನನ್ನ ಸಮಕ್ಷಮ ಯಾವುದೆ ಮಹಜರ್ ಮಾಡಿಲ್ಲ, ಮೃತ ಕುಟುಂಬಕ್ಕೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.